**ದಿಃ30.06.2026 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 1ನೇ ಪ್ರತಿವಾದಿ ಪರ ಶ್ರೀ.ಎಂ.ಆರ್.ಜೆ ವಕೀಲರಿಂದ ಃ**

ನನ್ನ ತಂದೆ ತಮ್ಮ ಜೀವಿತಾವಧಿಯಲ್ಲಿ ಕೆಲವೊಂದು ಆಸ್ತಿಗಳ ಸಂಬಂಧ ಮಾರಾಟ ಮಾಡಲು ಒಪ್ಪಿ ಕ್ರಯದ ಕರಾರು ಪತ್ರವನ್ನು ಮಾಡಿಕೊಂಡಿದ್ದರು ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಸಾಕ್ಷಿಗೆ ದಿಃ20.08.1998 ರ ಕ್ರಯದ ಕರಾರು ಪತ್ರವನ್ನು ತೋರಿಸಿ ಅದರ ಮೇಲೆ ಇರುವ ಸಹಿ ಯಾರದು ಎಂದರೆ ಸಾಕ್ಷಿ ಅದರ ಮೇಲೆ ಇರುವ ಸಹಿಗಳನ್ನು ಗುರುತಿಸಿ ನನ್ನ ಮತ್ತು ನನ್ನ ತಂದೆಯ ಸಹಿ ಎಂದು ಹೇಳಿರುತ್ತಾರೆ. ಸಾಕ್ಷಿಗೆ ತೋರಿಸಲಾದ ದಾಖಲೆಯನ್ನು ನಿಡಿ.1 ಎಂದು ಮತ್ತು ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಡಿ.1(ಎ) ಮತ್ತು (ಬಿ) ಎಂದು ಗುರುತಿಸಲಾಯಿತು. ನಿಡಿ.1 ನ್ನು ನನ್ನ ತಂದೆ ಇವರು 1ನೇ ಪ್ರತಿವಾದಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಅವರ ಮಧ್ಯೆ ಏನು ಒಪ್ಪಂದ ಆಗಿತ್ತು ನನಗೆ ಮಾಹಿತಿ ಇಲ್ಲ ಆದರೆ ನನ್ನಿಂದ ಸಹಿ ತೆಗೆದುಕೊಂಡಿದ್ದರು ಎನ್ನುತ್ತಾರೆ. ಬಿಳಿಗೇರಿ ಗ್ರಾಮದ ಸರ್ವೆ ನಂ.276, 268/1, 268/4 ರ ಆಸ್ತಿಗಳು ನನ್ನ ತಂದೆಯ ಜೀವಿತಾವಧಿಯಲ್ಲಿ ಅವರ ಸ್ವಾಧೀನ ಅನುಭವದಲ್ಲಿ ಇದ್ದವು ಎಂದರೆ ಸರಿ. ನಿಡಿ.1 ರ ಷರತ್ತಿನ ಅನ್ವಯ ನಾನು 1ನೇ ಪ್ರತಿವಾದಿ ಪರವಾಗಿ ಬಿಳಿಗೇರಿ

20-06-26

ಗ್ರಾಮದ ಸರ್ವೆ ನಂ.276, 268/1, 268/4 ರ ಬಾಬ್ತು ಆಸ್ತಿಗಳ ಸಂಬಂಧ ಕ್ರಯಪತ್ರ ಬರೆದುಕೊಳ್ಳಲು ಬಾಧ್ಯಸ್ಥರು ಎಂದರೆ ಸಾಕ್ಷಿ ಕೇಸ್ ನಡೆಯುತ್ತಿದೆ ಎನ್ನುತ್ತಾರೆ. ನಿಪಿ.1 ರಿಂದ 5 ರ ಆರ್.ಟಿ.ಸಿಗಳಲ್ಲಿ ಕಂಡು ಬರುವ ಎಲ್ಲಾ ಖಾತಾದಾರರು ಈ ದಾವೆಯಲ್ಲಿ ಪಕ್ಷಕಾರರು ಅಲ್ಲ ಎಂದರೆ ಸರಿ. ನಿಪಿ.1 ರಿಂದ 5 ರ ಆರ್.ಟಿ.ಸಿಗಳಲ್ಲಿ ಕಂಡು ಬರುವ ಎಲ್ಲಾ ಖಾತಾದಾರರು ನಮ್ಮ ದಂಬೆಕೋಡಿ ಕುಟುಂಬದ ಸದಸ್ಯರು ಎಂದರೆ ಸರಿ. ನಾನು ಈ ದಾವೆಯಲ್ಲಿ ನಮ್ಮ ದಂಬೆಕೋಡಿ ಕುಟುಂಬದ ಎಲ್ಲಾ ಸದಸ್ಯರನ್ನು ಸೇರಿಸದೇ ಮತ್ತು ಸದರಿ ಕುಟುಂಬಕ್ಕೆ ಸೇರಿದ ಎಲ್ಲಾ ಆಸ್ತಿಗಳನ್ನು ಸೇರ್ಪಡೆ ಮಾಡದೇ ಈ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸಾಕ್ಷಿ ನನಗೆ ಬರಬೇಕಾದ ಆಸ್ತಿ ಮೇಲೆ ನಾನು ದಾವೆ ಹೂಡಿದ್ದೇನೆ ಎನ್ನುತ್ತಾರೆ. 1ನೇ ಪ್ರತಿವಾದಿಯ ಸ್ವಾಧೀನ ಅನುಭವದಲ್ಲಇರುವ ಆಸ್ತಿಗಳಲ್ಲೂ ಸಹ ಅಕ್ರಮವಾಗಿ ಹಿಸ್ಸೆ ಪಡೆಯಬೇಕೆಂಬ ಉದ್ದೇಶದಿಂದ ಈ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ.

30-06-26

**ಪಾಟೀ ಸವಾಲುಃ 2 ರಿಂದ 5 ನೇ ಪ್ರತಿವಾದಿ ಪರ ಶ್ರೀ.ಬಿ.ಸಿ.ಪಿ ವಕೀಲರಿಂದ ಃ**

2 ರಿಂದ 5ನೇ ಪ್ರತಿವಾದಿಗಳು ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದು ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

30-06-26

(ಸಿ. ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.